## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.58/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಕೆ.ವಿ. ರಘುನಾಥ | CW: 1 | PW: 1 |
| ತಂದೆಯ ಹೆಸರು | : | ವೆಂಕಟೇಶಪ್ಪ | | |
| ವಯಸ್ಸು | : | 36 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಗೋವಿನಕೋವಿ | | |

ದಿನಾಂಕಃ 16.10.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ.3 ನನ್ನ ತಮ್ಮ. ಚಾಸಾ.4 ನನ್ನ ಸಂಬಂಧಿ. ಚಾಸಾ.2 ರವರು ಗೊತ್ತಿಲ್ಲ. ನಾನು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ 1 ನೇ ಆರೋಪಿಯು ಬೈಸಕಲ್ ಟ್ರಾಲಿ ಮಾಡಿಕೊಂಡು ಅದರಲ್ಲಿ ಕಲ್ಲುಕಂಬಗಳಿಗೆ ಸುತ್ತುವ ತಂತಿಯನ್ನು ಹಾಕಿಕೊಂಡು ಏಕಏಕಿ ನಮ್ಮ ಜಮೀನಿಗೆ ಬೇರೆ ಜನರನ್ನು ಕರೆದುಕೊಂಡು ಬಂದು ಕಲ್ಲುಗಳನ್ನು ನೆಡುತ್ತಿದ್ದರು. ಯಾಕೆ ನಮ್ಮ ಜಮೀನಿನಲ್ಲಿ ಕಲ್ಲುಕಂಬ ನೆಡುತ್ತಿದ್ದೀಯಾ ಎಂದು 1 ನೇ ಆರೋಪಿಯನ್ನು ಕೇಳಲಾಗಿ ಇದು ನಮ್ಮ ಜಮೀನು ಎಷ್ಟು ದಿನ ಅಂತ ನೋಡಬೇಕು ಎಂದು ಮಚ್ಚಿನಿಂದ ನನಗೆ ಹೊಡೆಯಲು ಬಂದ . ಮಚ್ಚಿನ ಕೈಹಿಡಿಯಿಂದ ನನ್ನ ಎದೆಗೆ ಗುದ್ದಿದ. ಅದರಿಂದ ನನ್ನ ಎದೆಯ ಮೂಳೆ ಮುರಿದಿರುತ್ತದೆ. 1 ನೇ ಆರೋಪಿಯ ಜೊತೆ ಬಂದಿದ್ದ ಬೇರೆ ಊರಿನ ಇಬ್ಬರು ನನ್ನ ಕೈಗಳನ್ನು ಬಿಗಿಯಾಗಿ ಹಿಡಿದು ಕೆಳಗೆ ಬಿಳಿಸಿದಾಗ 1 ನೇ ಆರೋಪಿಯು ಕಾಲಿನಿಂದ ನನಗೆ ಒದ್ದ. ನನಗೆ ನನಗೆ ಮೊದಲೇ ಕಾಲು ಫ್ರಾಕ್ಚರ್ ಆಗಿದ್ದರಿಂದ ಅದೇ ಜಾಗಕ್ಕೆ 1 ನೇ ಆರೋಪಿಯು ಭಲವಾಗಿ ಹೊಡೆದ. ಆಗ ನನಗೆ ಪ್ರಜ್ಞೆ

ತಪ್ಪಿತು. ಗಲಾಟೆಯ ವಿಚಾರ ಗೊತ್ತಾಗಿ ನನ್ನ ತಂದೆ ಮತ್ತು ಚಾಸಾ.3 ರವರು ಸ್ಥಳಕ್ಕೆ ಬಂದರು. 1 ನೇ ಆರೋಪಿಯು ನನ್ನ ತಂದೆ ಮತ್ತು ಚಾಸಾ.3 ರವರಿಗೂ ಸಹ ಹೊಡೆದ. ಅಕ್ಕಪಕ್ಕದ ಜನರು ಬಂದ ಜಗಳ ಬಿಡಿಸಿದರು. 1 ಆರೋಪಿಯು ಕಲ್ಲುಕಂಬಗಳನ್ನು ಕಿತ್ತು ಹಾಕಿದ. ನಮ್ಮ ಸಾಗುವಾನಿ ಮತ್ತು ಅಡಿಕೆ ಮರಕ್ಕೆ ವಿಷಹಾಕಿ 1 ನೇ ಆರೋಪಿಯು ನಾಶಪಡಿಸಿರುತ್ತಾನೆ. ಬೇರೆ ಊರಿನ ಜನರನ್ನು ಪದೆ ಪದೆ ಕರೆದುಕೊಂಡು ಬಂದು ನಮ್ಮ ಮೇಲೆ ದೌಜನ್ಯ ಮಾಡಿರುತ್ತಾರೆ. ನಮ್ಮ ತಾಯಿ ಜಮೀನಿನ ಹತ್ತಿರ ಬಂದಾಗ 1 ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು ಪಂಚೆ ಎತ್ತಿ ತೊಡೆ ತಟ್ಟಿ ಕೊಲೆ ಬೆದರಿಕೆ ಹಾಕಿರುತ್ತಾನೆ. ನಮ್ಮ ಜಮೀನಿಗೆ ಬರುವ ಕೆಲಸಗಾರರಿಗೆ 1 ನೇ ಆರೋಪಿಯು ಅವರಿಗೆ ಕೆಲಸಕ್ಕೆ ಹೋಗಬೇಡಿ ಇಲ್ಲದಿದ್ದರೆ ವಾಮಾಚಾರ ಮಾಡುಸುತ್ತೇನೆ ಎಂದು ಬೆದರಿಕೆ ಹಾಕುತ್ತಾನೆ. 1 ನೇ ಆರೋಪಿಯಿಂದ ನಮ್ಮ ಜೀವಕ್ಕೆ ಬೆದರಿಕೆ ಇದೆ. ದೂರು ಕೊಟ್ಟ ನಂತರವೂ ಸಹ 1 ನೇ ಆರೋಪಿಯು ನಮ್ಮ ತಂದೆಯ ಮೇಲೆ ಹಲ್ಲೆ ಮಾಡಿರುತ್ತಾನೆ.

ಈ ಸಂಬಂಧ ನಾನು ನ್ಯಾಮತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಸಹ ಪೊಲೀಸರು ಅದರ ಮೇಲೆ ಎಫ್.ಐ.ಆರ್ ಮಾಡಲಿಲ್ಲ ಹಾಗಾಗಿ ರಿಜಿಸ್ಟರ್ ಪೋಸ್ಟ್ ಮೂಲಕ ಎಸ್.ಪಿ. ಸಬ್ ಇನ್ಸಪೆಕ್ಟರ್ ನ್ಯಾಮತಿ ರವರಿಗೆ ದೂರು ನೀಡಿರುತ್ತೇನೆ .

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3 ಆರೋಪಿಗಳನ್ನು ನೋಡಿ 1 ನೇ ಆರೋಪಿಯು ಮಾತ್ರ ನಮ್ಮ ಮೇಲೆ ಹಲ್ಲೆ ಮಾಡಿದ್ದು, 2 ಮತ್ತು 3 ನೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿಲ್ಲ ಹಾಗೂ ಈ ಕೇಸಿಗೂ ಅವರಿಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು ದೂರನ್ನು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ದಿಃ 19.09.2022 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗಲಾಟೆಯು ದಿಃ 14.09.2022 ರಂದು ಮದ್ಯಾಹ್ನ 12.30 ರಲ್ಲಿ ಆಗಿರುತ್ತದೆ ಎಂದರೆ ಸರಿ. ಗಲಾಟೆ ನಡೆಯುವಾಗ 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯೊಂದಿಗೆ ಸೇರಿ ನನ್ನನ್ನು ತಡೆದಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಪ್ರಾಣ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ಚಾಸಾ.2 ರಿಂದ 4 ರವರು

ಜಗಳ ಬಿಡಿಸಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ.2 ರವರು ಇರಲಿಲ್ಲ ಚಾಸಾ.3 ಮತ್ತು 4 ರವರು ಜಗಳ ಬಿಡಿಸಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯು 4 ಜನರನ್ನು ಕರೆದುಕೊಂಡು ಬಂದ ನನಗೆ ದೊಣ್ಣೆಯಿಂದ ಹೊಡೆದಿರುವುದಾಗಿ ದೂರಿನಲ್ಲಿ ತಿಳಿಸಿದ್ದು, ಆದರೆ ಆ ದಿನ 1 ನೇ ಆರೋಪಿಯು 2 ಮತ್ತು 3 ನೇ ಆರೋಪಿತರು ನನಗೆ ಕೈಕಾಲುಗಳಿಂದ ಹಲ್ಲೆ ಮಾಡಿರುತ್ತಾರೆ ಎಂದು ದಿಃ19.09.2022 ರಂದು ಪೊಲೀಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದರು ಸಹ ಇಲ್ಲ ಎಂದು ಅವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಹೆಚ್.ಎಂ.ಎಸ್ ವಕೀಲರಿಂದಃ-

ನಿಪಿ.1 ದೂರನ್ನು ಎಲ್ಲಿ ಯಾರಿಂದ ಟೈಪ್ ಮಾಡಿಸಿರುತ್ತೇನೆ ಎಂದರೆ ಸಾಕ್ಷಿಯು ಹೊನ್ನಾಳಿಯಲ್ಲಿ ಸಿರಿ ಪೋಟೋ ಸೆಂಟರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.1 ದೂರಿನಲ್ಲಿ ಆರೋಪಿಗಳ ವಿವರ ಮತ್ತು ಗಲಾಟೆಯ ಮಾಹಿತಿ ಇಲ್ಲ ಎಂದರೆ ಸರಿ. ನಮ್ಮ ಮತ್ತು 1 ನೇ ಆರೋಪಿಯ ನಡುವೆ ಜಮೀನಿಗೆ ಓಣಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ನನ್ನ ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ನಡೆಯದೆ ಇದ್ದರು ಸಹ ಸಿವಿಲ್ ದಾವೆಗೆ ಅನುಕೂಲವಾಗಲಿ ಎಂದು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ವಿರುದ್ಧ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.